# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.

**ಆಡಳಿತ ಕಛೇರಿ : ನಂ. 30, 15ನೇ ಅಡ್ಡ ರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011**
**ದೂರವಾಣಿ : 26632783, 26633566**
Email : ho@bcbbank.co Website : www.bcbbank.co

## 48ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನ 2021-2022ನೇ ಸಾಲಿನ 48ನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು **ದಿನಾಂಕ 18-09-2022ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.**, ನಂ. 30, 15ನೇ ಅಡ್ಡ ರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು-560 011. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಡಾ|| ಎಂ.ಸಿ.ಜಗತ್** ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರ್ಕಾರದ ಆದೇಶದಂತೆ **ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್)** ಮೂಲಕ ಕೆಳಕಂಡ ಕಾರ್ಯಸೂಚಿಯನ್ನು ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ. ಸದಸ್ಯರು ದಯಮಾಡಿಸಿ ಸಭೆಯ ಕಾರ್ಯ ಕಲಾಪಗಳಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಬೇಕಾಗಿ ಪ್ರಾರ್ಥನೆ.

QR Code

**Meeting Link : http://turl.co/BCBBNK**

### ಕಾರ್ಯಸೂಚಿ

1. ಸರ್ವಸದಸ್ಯರ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು.
2. ದಿನಾಂಕ 31-10-2021ರಂದು ನಡೆದ ಬ್ಯಾಂಕಿನ 47ನೇ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡುವುದು.
3. 2021-22ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಮತ್ತು ಅನುಮೋದನೆ.
4. 2021-22ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಅಂಗೀಕಾರ.
5. 2021-22ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು.
6. 2023-24ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಮಂಜೂರು ಮಾಡುವುದು.
7. ಕರ್ನಾಟಕ ಸಹಕಾರ ಕಾಯ್ದೆ ನಿಯಮಗಳ ಅನುಸಾರವಾಗಿ ತಿದ್ದುಪಡಿಯಾಗಿರುವ ಪ್ರಕಾರ ಬ್ಯಾಂಕಿನ ಬೈಲಾ ತಿದ್ದುಪಡಿಗಳನ್ನು ಅನುಮೋದಿಸುವುದು.
8. 2022-23ನೇ ಸಾಲಿನ ಕಾರ್ಯಕ್ರಮದ ಪರಿಗಣನೆ.
9. ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಪರಿಶೀಲನೆ.
10. ನಿರ್ದೇಶಕರು ಮತ್ತು ಅವರ ಸಂಬಂಧಿಗಳ ಸಾಲಗಳ ಬಗ್ಗೆ ಪರಿಶೀಲನೆ.
11. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

ಸ್ಥಳ : ಬೆಂಗಳೂರು
ದಿನಾಂಕ : 26-08-2022

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
**ಕೆ. ಶೈಲಜ**
ಪ್ರಭಾರ ಕಾರ್ಯದರ್ಶಿ

## ಸೂಚನೆಗಳು :

1. ಸರ್ಕಾರದ ಆದೇಶ ಸಂಖ್ಯೆ:ಸಇ 69 ಸಿಎಲ್‌ಎಮ್ 2022 (ಇ) ಬೆಂಗಳೂರು, ದಿನಾಂಕ 25-08-2022ರ ಪ್ರಕಾರ ರಾಜ್ಯದಲ್ಲಿ ಕೋವಿಡ್ 19 ಪ್ರಕರಣಗಳು ಪ್ರಸ್ತುತ ಏರಿಕೆಯಾಗುತ್ತಿರುವುದರಿಂದ ಮುನ್ನೆಚ್ಚರಿಕೆ ವಹಿಸುವುದು ಸೂಕ್ತವೆಂದು ಹಾಗೂ ಸಹಕಾರ ಸಂಘ/ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಅನೇಕ ಸದಸ್ಯರು ಹಿರಿಯ ನಾಗರೀಕರಾಗಿದ್ದು, ಇವರುಗಳ ಆರೋಗ್ಯದ ಹಿತದೃಷ್ಟಿಯಿಂದ 2021-22ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು **ವಿಡಿಯೋ ಕಾನ್ಫರೆನ್ಸ್** (ವರ್ಚುವಲ್ ಮೀಟಿಂಗ್) ಮೂಲಕ ನಡೆಸಲು ಆದೇಶವನ್ನು ಹೊರಡಿಸಿರುತ್ತದೆ. ಅದರಂತೆ, ಮಾನ್ಯ ಸದಸ್ಯರು ವಿಡಿಯೋ ಕಾನ್ಫರೆನ್ಸ್ ಮೂಲಕ ಬ್ಯಾಂಕಿನ ಸರ್ವಸದಸ್ಯರ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ/ಸೂಚನೆಗಳನ್ನು ನೀಡಿ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳಿಗೆ ಅನುಮೋದನೆ ನೀಡಬೇಕೆಂದು ಕೋರುತ್ತೇವೆ.
2. ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮುಖಾಂತರ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು Zoom App ಡೌನ್‌ಲೋಡ್ ಮಾಡಿಕೊಂಡು **http://turl.co/BCBBNK** ಗೆ ಲಾಗಿನ್ ಆಗಿ ಅಥವಾ **QR Code** ಸ್ಕ್ಯಾನ್ ಮಾಡಿ ತಮ್ಮ ಹೆಸರು, ಸದಸ್ಯತ್ವದ ಸಂಖ್ಯೆ (ಎಲ್.ಎಫ್.ನಂಬರ್) ಮತ್ತು ಮೊಬೈಲ್ ನಂಬರ್ ವಿವರಗಳನ್ನು ನಮೂದಿಸಬೇಕು. ನೀವು ಲಾಗಿನ್ ಮಾಡಿದಾಗ ಆಡಿಯೋವನ್ನು ಮ್ಯೂಟ್ ಮಾಡಿಕೊಳ್ಳುವುದು.
3. ತಮ್ಮ ಸಲಹೆ/ಸೂಚನೆಗಳನ್ನು ಸಭೆಯಲ್ಲಿ ಮಂಡಿಸಲು ಇಚ್ಛಿಸುವ ಸುಸ್ತಿದಾರರಲ್ಲದ ಸದಸ್ಯರು ಸಭೆಗೆ 7 ದಿನಗಳ ಮುಂಚೆ ಲಿಖಿತ ಮೂಲಕ ಕಾರ್ಯದರ್ಶಿಯವರಿಗೆ ತಲುಪಿಸಬೇಕು. ಅದರಂತೆ ಯಾವುದಾದರೂ ಕೋರಿಕೆ ಸಲ್ಲಿಸಿದ್ದಲ್ಲಿ ಅದನ್ನು ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮುಖಾಂತರ ನಡೆಯುವ ಸಭೆಯಲ್ಲಿ ಚರ್ಚಿಸಲಾಗುವುದು.
4. ವಿಳಾಸ ಬದಲಾವಣೆ ಇದ್ದಲ್ಲಿ ತಕ್ಷಣ ಬ್ಯಾಂಕಿಗೆ ತಮ್ಮ ಹೊಸ ವಿಳಾಸವನ್ನೊಳಗೊಂಡ ಇತ್ತೀಚಿನ ಅಂಗೀಕೃತ ಪುರಾವೆಯನ್ನು ಅರ್ಜಿಯೊಂದಿಗೆ ಸಲ್ಲಿಸಿ ವಿಳಾಸ ಬದಲಾಯಿಸಿಕೊಳ್ಳತಕ್ಕದ್ದು.
5. 2021-22ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಮತ್ತು ಅದರ ಅನುವರ್ತನೆಯನ್ನು ಪ್ರತ್ಯೇಕವಾಗಿ ಮುದ್ರಿಸಿದ್ದು, ಇದರ ಪ್ರತಿಯನ್ನು ಸದಸ್ಯರು ದಿನಾಂಕ : 12-09-2022 ರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಮತ್ತು ಎಲ್ಲಾ ಶಾಖೆಗಳಲ್ಲಿ ಪಡೆಯಬಹುದು.
6. ಬ್ಯಾಂಕಿನ Website : www.bcbbank.co ದಲ್ಲಿ ಸರ್ವಸದಸ್ಯರ ಸಭೆಯ ಸೂಚನಾ ಪತ್ರ, ವಾರ್ಷಿಕ ವರದಿ ಮತ್ತು ಆಡಿಟ್ ವರದಿಯನ್ನು ವೀಕ್ಷಿಸಬಹುದು.
7. ಬ್ಯಾಂಕಿನ ಕಾರ್ಯವ್ಯಾಪ್ತಿಯ ಹೊರಗೆ ವಾಸಿಸುತ್ತಿರುವಂತಹ ಸದಸ್ಯರುಗಳು ಯಾವುದೇ ರೀತಿಯ ಸಾಲ ಸೌಲಭ್ಯಗಳನ್ನು ಬ್ಯಾಂಕಿನಿಂದ ಪಡೆಯಲು ಅರ್ಹರಾಗಿರುವುದಿಲ್ಲ. ಆದುದರಿಂದ ಅಂತಹ ಸದಸ್ಯರುಗಳು ತಮ್ಮ ಸದಸ್ಯತ್ವವನ್ನು ತಕ್ಷಣ ರದ್ದುಗೊಳಿಸಿಕೊಳ್ಳಲು ಕೋರಲಾಗಿದೆ.
8. ಷೇರು ಸರ್ಟಿಫಿಕೇಟನ್ನು ಪಡೆಯದೇ ಇರುವ ಸದಸ್ಯರು ಆಡಳಿತ ಕಛೇರಿಯಲ್ಲಿ ಷೇರು ಸರ್ಟಿಫಿಕೇಟನ್ನು ಪಡೆಯಬೇಕಾಗಿ ವಿನಂತಿ.
9. ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಪ್ರತಿಭಾವಂತ ಮಕ್ಕಳಿಗೆ ಉತ್ತೇಜನ ಧನ ಸಹಾಯ ನೀಡುವುದಕ್ಕೆ ಸಂಬಂಧಿಸಿದಂತೆ, ಮೇ-ಜೂನ್ 2022-23ನೇ ಸಾಲಿನಲ್ಲಿ ನಡೆದ ಪರೀಕ್ಷೆಯಲ್ಲಿ ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಮಕ್ಕಳು ಪಿ.ಯು.ಸಿ. 2ನೇ ವರ್ಷದ ಪರೀಕ್ಷೆಯಲ್ಲಿ ಮತ್ತು ಪದವಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ. 85ಕ್ಕಿಂತ ಹೆಚ್ಚಿಗೆ ಅಂಕ ಪಡೆದಂತಹವರು ಹಾಗೂ ರಾಷ್ಟ್ರ ಮಟ್ಟದ ಕ್ರೀಡಾ ವಿಭಾಗದಲ್ಲಿ ಪ್ರಶಸ್ತಿ ಪಡೆದವರು ಈ ಉತ್ತೇಜನ ಪಡೆಯಲು ಅರ್ಹರಾಗಿದ್ದು ವಾರ್ಷಿಕ ಮಹಾಸಭೆಯ ದಿನಾಂಕಕ್ಕೆ 7 ದಿವಸಗಳ ಮುಂಚಿತವಾಗಿ ಸದಸ್ಯತ್ವದ ದಾಖಲೆ ಹಾಗೂ ಅಂಕಪಟ್ಟಿ ಸಹಿತ ಕಾರ್ಯದರ್ಶಿಯವರಿಗೆ ಅರ್ಜಿ ಸಲ್ಲಿಸಬಹುದು.
10. **ಮರಣೋತ್ತರ ಪರಿಹಾರ ನಿಧಿಯನ್ನು ಸದಸ್ಯರು ಮರಣ ಹೊಂದಿದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಿದರೆ ಮಾತ್ರ ಈ ಪರಿಹಾರ ನಿಧಿಗೆ ವಾರಸುದಾರರು ಅರ್ಹರಾಗಿರುತ್ತಾರೆ.**
11. ಸದಸ್ಯರುಗಳ ಠೇವಣಿಗಳ ಮೇಲೆ ನೀಡುವ ಬಡ್ಡಿಗೆ Sec.194A (3) (V) of Income Tax Act 1961 ಪ್ರಕಾರ T.D.S. ನಿಂದ ವಿನಾಯಿತಿ ಪಡೆಯಲು ಅರ್ಹ ಸದಸ್ಯರು/ಗ್ರಾಹಕರು ಆದಾಯ ತೆರಿಗೆ ಫಾರಂ ನಂ. 15ಜಿ/ಹೆಚ್ ನಲ್ಲಿ ಪಾನ್ ಸಂಖ್ಯೆಯನ್ನು ನಮೂದಿಸಿ ಬ್ಯಾಂಕಿನಲ್ಲಿ ಈ ಕೂಡಲೇ ಸಲ್ಲಿಸಲು ಕೋರಲಾಗಿದೆ. ಇದನ್ನು ಸಲ್ಲಿಸದಿದ್ದಲ್ಲಿ ವಾರ್ಷಿಕವಾಗಿ ಸಾಮಾನ್ಯರಿಗೆ ರೂ 40,000/- ಮತ್ತು ಹಿರಿಯ ನಾಗರೀಕರಿಗೆ ರೂ.50,000/-ಗಳ ಮೇಲ್ಪಟ್ಟು ಪಡೆಯುವ ಬಡ್ಡಿ ಮೇಲೆ ಶೇ.10 ರಂತೆ ಟಿ.ಡಿ.ಎಸ್. ಕಡಿತಗೊಳಿಸಲಾಗುವುದು. ರೂ.2,50,000/- ವರೆಗಿನ ಬಡ್ಡಿ ಆದಾಯಗಳಿಸುವಂತಹವರು 15G ಮತ್ತು 60 ವರ್ಷ ಮೇಲ್ಪಟ್ಟವರು ರೂ.3,00,000/- ವರೆಗಿನ ಬಡ್ಡಿ ಆದಾಯ ಗಳಿಸಿದಲ್ಲಿ 15H ಸಲ್ಲಿಸುವುದು. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಕೇಂದ್ರ ಕಛೇರಿ ಅಥವಾ ಶಾಖೆಗಳಲ್ಲಿ ಸಂಪರ್ಕಿಸಲು ಈ ಮೂಲಕ ವಿನಂತಿಸಲಾಗಿದೆ.

12. ಉಳಿತಾಯ ಖಾತೆಯನ್ನು ಹೊಂದಿಲ್ಲದ ಸದಸ್ಯರುಗಳು ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆದರೆ, ಆಯಾ ವರ್ಷದ ಡಿವಿಡೆಂಡನ್ನು ಅವರವರ ಉಳಿತಾಯ ಖಾತೆಗಳಿಗೆ ವರ್ಗಾಯಿಸಲಾಗುವುದು. ಆದುದರಿಂದ ಉಳಿತಾಯ ಖಾತೆಯನ್ನು ತೆರೆಯಲು ಕೋರಲಾಗಿದೆ. ಬ್ಯಾಂಕು IFSC No. ಪಡೆದಿದ್ದು IBKL0008BCB ಆಗಿರುತ್ತದೆ. NEFT/RTGS ಸೌಲಭ್ಯ ಒದಗಿಸುತ್ತಿದೆ ಇದರಿಂದ ಬೇರೆ ಬ್ಯಾಂಕುಗಳ ಖಾತೆಗಳಿಂದ ಹಣವನ್ನು NEFT/RTGS ಮೂಲಕ ತಮ್ಮ ಖಾತೆಗಳಿಗೆ ವರ್ಗಾಯಿಸಬಹುದು ಮತ್ತು ತಮ್ಮ ಖಾತೆಗಳಿಂದ ಬೇರೆ ಬ್ಯಾಂಕುಗಳ ಖಾತೆಗಳಿಗೆ ಸಹ ವರ್ಗಾಯಿಸಬಹುದು. ಬೇರೆ ಬ್ಯಾಂಕುಗಳಲ್ಲಿ ನೆಟ್ ಬ್ಯಾಂಕಿಂಗ್ ಸೌಲಭ್ಯ ಹೊಂದಿದ್ದರೆ ಆ ಖಾತೆಗಳಿಂದ ತಮ್ಮ ಮೊಬೈಲ್ ಫೋನ್ ಮೂಲಕ ತಮ್ಮ ಖಾತೆಗಳಿಗೆ ಹಣ ವರ್ಗಾಹಿಸಬಹುದು. ಈ ಸೌಲಭ್ಯ ಪಡೆಯಲು ವಿನಂತಿ. ಉಳಿತಾಯ/ಚಾಲ್ತಿ ಖಾತೆಗಳಲ್ಲಿನ ವ್ಯವಹಾರಗಳಿಗೆ SMS Alert ಪಡೆಯಲು ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು ಸಲ್ಲಿಸಬೇಕಾಗಿ ವಿನಂತಿ.

13. ಸಾಲಗಾರರು ಸಾಲದ ಕಂತುಗಳನ್ನು ಬಡ್ಡಿ ಸಹಿತ ಪ್ರತಿ ತಿಂಗಳು ನಿಗಧಿತ ಅವಧಿಯೊಳಗೆ ಮರುಪಾವತಿ ಮಾಡಿದ್ದಲ್ಲಿ ಪಾವತಿಸಿದ ಬಡ್ಡಿಯಲ್ಲಿ ಶೇ. 1 ರಂತೆ ಬಡ್ಡಿ ರಿಯಾಯತಿ ನೀಡಲಾಗುವುದು. ಆಯಾ ಹಣಕಾಸು ವರ್ಷ ಪೂರ್ಣಗೊಂಡ ತಕ್ಷಣ ಈ ರಿಯಾಯಿತಿಯನ್ನು ಪಡೆಯಲು ಕೋರಿದೆ.

14. ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾನುಸಾರ 10 ವರ್ಷಕ್ಕೂ ಮೇಲ್ಪಟ್ಟ ಚಾಲ್ತಿಯಲ್ಲಿರದ ಎಲ್ಲಾ ತರಹದ ಠೇವಣಿ ಖಾತೆಗಳ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ವರ್ಗಾಯಿಸಬೇಕಾಗಿದ್ದು, ಸದಸ್ಯರು ಇದನ್ನು ಗಮನಿಸಿ ತಮ್ಮ ಠೇವಣಿ ಖಾತೆಗಳನ್ನು ಚಾಲ್ತಿ ಮಾಡುವಂತೆ ಮನವಿ ಮಾಡಿದೆ.

15. ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಪ್ರಕಾರ ಎಲ್ಲಾ ಮಾನ್ಯ ಸದಸ್ಯರು ಕೆ.ವೈ.ಸಿ. ದಾಖಲೆಗಳನ್ನು ಸಲ್ಲಿಸಬೇಕಾಗಿದ್ದು, ಸಲ್ಲಿಸದೇ ಇರುವ ಸದಸ್ಯರು ತಮ್ಮ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 2 ಭಾವಚಿತ್ರ, ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಜೆರಾಕ್ಸ್ ಪ್ರತಿಗಳನ್ನು ನೀಡಬೇಕಾಗಿ ಕೋರಿದೆ.

16. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ಕ್ಕೆ ಮಾಡಿರುವ ತಿದ್ದುಪಡಿಗಳಿಗನುಸಾರವಾಗಿ ಬ್ಯಾಂಕಿನ ಉಪನಿಬಂಧನೆಗಳಿಗೆ ಸಮಗ್ರ ತಿದ್ದುಪಡಿಯಾಗಿರುವುದರಿಂದ ಮುಂಬರುವ ಬ್ಯಾಂಕಿನ ಸರ್ವಸದಸ್ಯರ ಸಭೆಗಳಲ್ಲಿ ಸುಸ್ತಿದಾರರಲ್ಲದ ಸದಸ್ಯರು ಮತ ಚಲಾಯಿಸಲು ಉಪನಿಬಂಧನೆ 44ರ ರೀತಿ ಈ ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

1) 3 ನಿರಂತರ ಸಹಕಾರ ವರ್ಷಗಳಲ್ಲಿ ಪ್ರತಿ ವರ್ಷ ಒಬ್ಬ ಸದಸ್ಯನು ಉಪನಿಬಂಧನೆ 20ರಲ್ಲಿ ನಿರ್ಧಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು.

ಅ) ಸದಸ್ಯನು ಕನಿಷ್ಠ ಷೇರು ಮೊಬಲಗು ರೂ.500/- ಹೊಂದಿರತಕ್ಕದ್ದು.

ಆ) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ರೂ.2.500/- ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ.

ಇ) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು 2 ಇರತಕ್ಕದ್ದು

2) ಕಳೆದ 5 ಸಾಮಾನ್ಯ ಸಭೆಗಳ ಪೈಕಿ 3 ಸಾಮಾನ್ಯ ಸಭೆಗಳಿಗೆ ಹಾಜರಾಗತಕ್ಕದ್ದು.

ಮತ ಚಲಾಯಿಸಲು ಮೇಲೆ ತಿಳಿಸಿರುವ ಅರ್ಹತೆಗಳಲ್ಲಿ ಎಲ್ಲಾ ಅರ್ಹತೆಗಳನ್ನು ಪಾಲಿಸಿರಬೇಕು ಅದಕ್ಕೆ ತಪ್ಪಿದ್ದಲ್ಲಿ ಸದಸ್ಯರಿಗೆ ಮತ ಚಲಾಯಿಸುವ ಹಕ್ಕಿರುವುದಿಲ್ಲ.

ಮೇಲೆ ತಿಳಿಸಿರುವ ಅಂಶಗಳನ್ನು ತಾವು ಗಮನಿಸಿ ತಮ್ಮ ಮೂಲ ಷೇರು ಮೊಬಲಗು ರೂ.500/-ಕ್ಕಿಂತ ಕಡಿಮೆ ಇದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ತಕ್ಷಣ ಪಾವತಿಸಬೇಕೆಂದು ಹಾಗೂ ಕನಿಷ್ಠ ಸೇವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಮನವಿ ಮಾಡಿದೆ.

ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕೇಂದ್ರ ಕಛೇರಿಯ ಷೇರು ವಿಭಾಗದಲ್ಲಿ ಖುದ್ದಾಗಿ ಅಥವಾ ದೂರವಾಣಿ ಮುಖಾಂತರ ಮಾಹಿತಿ ಪಡೆಯಲು ವಿನಂತಿ.

ಬ್ಯಾಂಕಿನ ಎಲ್ಲಾ ನಿರ್ದೇಶಕರು ಮೇಲೆ ತಿಳಿಸಿರುವ ಬ್ಯಾಂಕಿನ ಸೇವೆಗಳನ್ನು ಬಳಸಿಕೊಂಡಿರುತ್ತಾರೆ.

# ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.

**ಜಯನಗರ, ಬೆಂಗಳೂರು – 560 011**

## ಬೈಲಾ ತಿದ್ದುಪಡಿಗಳು

| ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ಬೈಲಾ ಸಂಖ್ಯೆ | ಅನುಮೋದನೆಗಾಗಿ ಮಂಡಿಸಿರುವ ಬೈಲಾ ತಿದ್ದುಪಡಿ | ಬೈಲಾ ತಿದ್ದುಪಡಿಗೆ ಕಾರಣಗಳು |
|---|---|---|---|---|
| 4<br>4.29 | **ಪದಗಳ ಅರ್ಥವಿವರಣೆ**<br>"ಡೆಲಿಗೇಟ್" ಎಂದರೆ, ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಒಬ್ಬ ನಿರ್ದೇಶಕ. | 4<br>4.29 | **ಪದಗಳ ಅರ್ಥವಿವರಣೆ**<br>"ಡೆಲಿಗೇಟ್" ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ. | ಕೆ.ಸಿ.ಎಸ್. ಕಾಯ್ದೆ ತಿದ್ದುಪಡಿ ಸೆಪ್ಟೆಂಬರ್ 2021ರ ಪ್ರಕಾರ |
| 11 | **ಷೇರುಗಳಿಗಾಗಿ ಅರ್ಜಿ :**<br>ಷೇರುಗಳಿಗಾಗಿ ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಸಲ್ಲಿಸತಕ್ಕದ್ದು, ಅಂತಹ ಅರ್ಜಿಯ ಸಹಿತ ಕನಿಷ್ಟ ಒಂದು ಷೇರಿನ ಪೂರ್ಣ ಮೌಲ್ಯದೊಂದಿಗೆ ಷೇರು ಶುಲ್ಕ ಪ್ರತಿ ಷೇರಿಗೆ ಇಪ್ಪತ್ತು ರೂ. ಗಳಂತೆ ಮತ್ತು ಪ್ರವೇಶಧನ ಐವತ್ತು ರೂ.ಗಳಂತೆ ಪಾವತಿಸತಕ್ಕದ್ದು. ಈ ಷೇರು ಅರ್ಜಿಗಳನ್ನು ನಿರ್ದೇಶಕ ಮಂಡಳಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ವಿಲೇವಾರಿ ಮಾಡತಕ್ಕದ್ದು. | 11 | **ಷೇರು ಹಣಕ್ಕಾಗಿ ಅರ್ಜಿ :**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಕನಿಗೆ ಸಲ್ಲಿಸತಕ್ಕದ್ದು, ಅಂತಹ ಅರ್ಜಿಯ ಸಹಿತ ಕನಿಷ್ಟ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನ ಪಾವತಿಸತಕ್ಕದ್ದು. ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು.<br>ಕಾಯ್ದೆ ಕಲಂ 22ರಲ್ಲಿ ನಮೂದಿಸಿದ ಘಟಕಗಳನ್ನು ಹೊರತುಪಡಿಸಿ ಬ್ಯಾಂಕಿನ ಯಾವುದೇ ಸದಸ್ಯನ ಬಿಟ್ಟು ಷೇರು ಬ್ಯಾಂಕಿನ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ. | |
| 18<br>18.1 | **ಸದಸ್ಯನ ಕರ್ತವ್ಯಗಳು :**<br>**ಬ್ಯಾಂಕಿನ ಯಾರೇ ಸದಸ್ಯನು –**<br>ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ನೌಕರನಾಗಿರತಕ್ಕದ್ದಲ್ಲ; | 18<br>18.1 | **ಸದಸ್ಯನ ಕರ್ತವ್ಯಗಳು :**<br>**ಬ್ಯಾಂಕಿನ ಯಾರೇ ಸದಸ್ಯನು –**<br>ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದ ನೌಕರನಾಗಿರತಕ್ಕದ್ದಲ್ಲ; | |

| | | | | |
|---|---|---|---|---|
| 19 | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು** | 19 | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು** | |
| 19.3 | ಬ್ಯಾಂಕಿನ ಯಾವುದೇ ಸದಸ್ಯನು ಉಪನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತೀವರ್ಷ ಉಪಯೋಗಿಸಿಕೊಳ್ಳಲು ಸತತವಾಗಿ ಮೂರು ವರ್ಷಗಳ ಕಾಲ ತಪ್ಪಿದ್ದಲ್ಲಿ ಅಂತಹ ಸದಸ್ಯರಿಗೆ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ನಿರ್ದೇಶಕರ ಚುನಾವಣೆಯಲ್ಲಿ ಭಾಗವಹಿಸಲು, ಮತದಾನ ಮಾಡಲು ಮತ್ತು ಸ್ಪರ್ಧಿಸಲು ಮೂರು ವರ್ಷಗಳ ಕಾಲ ಹಕ್ಕು ಇರುವುದಿಲ್ಲ. | 19.3 | ಬ್ಯಾಂಕಿನ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದಿದ್ದಲ್ಲಿ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | |
| 44 | **ಮತ ನೀಡಿಕೆ :** | 44 | **ಮತ ನೀಡಿಕೆ :** | |
| 44.5 | ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;<br>(ಉ) ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಒಬ್ಬ ಸದಸ್ಯನಿಗೆ ಮೂರು ವರ್ಷಗಳ ಕಾಲ ಮತ ಚಲಾಯಿಸುವ ಹಕ್ಕಿರುವುದಿಲ್ಲ.<br>(ಊ) ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯನಿಗೆ ಮೂರು ವರ್ಷಗಳ ಕಾಲ ಮತ ಚಲಾಯಿಸುವ ಹಕ್ಕಿರುವುದಿಲ್ಲ; | 44.5 | ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;<br>(ಉ) ಯುಕ್ತವಾಗಿ ತಿಳಿಸಲಾದ ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷಗಳ ವರೆಗೆ ಮತ ಚಲಾಯಿಸುವ ಹಕ್ಕಿರುವುದಿಲ್ಲ.<br>(ಊ) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | |
| 54 | **ಮಂಡಲಿಯ ತೆರವಾದ ಸ್ಥಾನಗಳು :** | 54 | **ಮಂಡಲಿಯ ತೆರವಾದ ಸ್ಥಾನಗಳು :** | |
| 54.1 | ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರವು ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. | 54.1 | ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಲಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮ ನಿರ್ದೇಶನದ ಮೂಲಕ ಮಂಡಲಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | |

# ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.

**ಆಡಳಿತ ಕಛೇರಿ :** ನಂ.30, 15ನೇ ಅಡ್ಡ ರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011

**ಸಹಕಾರ ರತ್ನ ದಿವಂಗತ ಶ್ರೀ ಬಿ. ಎಲ್. ಲಕ್ಕೇಗೌಡ**
ಸಂಸ್ಥಾಪಕರು

**2021–22 ನೇ ಸಾಲಿನ ಆಡಳಿತ ಮಂಡಳಿ**

**ಡಾ|| ಎಂ.ಸಿ. ಜಗತ್**
ಅಧ್ಯಕ್ಷರು

**ಡಾ: ಎಂ. ವೀರಪ್ಪ**
ಉಪಾಧ್ಯಕ್ಷರು

**ಆಡಳಿತ ಮಂಡಳಿಯ ಸದಸ್ಯರು**

ಶ್ರೀ ಕೆ. ಎಲ್. ಗಂಗಾಧರಗೌಡ
ಶ್ರೀ ಜೆ. ಎಂ. ಜಯಪ್ರಕಾಶ್ (ಜೆ.ಪಿ.)
ಶ್ರೀ ಪಿ. ನರಸಿಂಹಮೂರ್ತಿ
ಶ್ರೀ ಜಿ. ಎನ್. ಆರ್. ಮೋಹನ
ಶ್ರೀ ಹೆಚ್. ಪಿಳ್ಳಾಂಜನಪ್ಪ
ಶ್ರೀ ಟಿ. ರವಿಶಂಕರ್
ಶ್ರೀ ಬಿ. ಎನ್. ಲೋಕೇಶ್
ಶ್ರೀ ಎಂ. ರಾಜಶೇಖರರೆಡ್ಡಿ
ಶ್ರೀ ಕೆ. ಎಸ್. ಸುಧಾಕರ್
ಶ್ರೀ ಎಸ್. ಬಸವರಾಜಪ್ಪ
ಶ್ರೀ ಕೆ. ಎಸ್. ನಂಜುಂಡೇಗೌಡ
ಶ್ರೀ ವಿ. ಶ್ರೀನಿವಾಸಯ್ಯ
ಡಾ|| ಮಹೇಶ್ ಅರವಿಂದ್
ಶ್ರೀಮತಿ ಬಿ. ಎಲ್. ನಂದಿನಿ
ಶ್ರೀಮತಿ ಎಂ.ಹೆಚ್. ಅನಿತ
ಶ್ರೀ ಬಿ.ಎಲ್. ಸಂಜೀವ್ (ವೃತ್ತಿಪರ)
ಶ್ರೀ ವಿ. ಎಲ್. ಗಂಗಾಧರ್ (ವೃತ್ತಿಪರ)

ಶ್ರೀಮತಿ ಕೆ. ಶೈಲಜ
ಪ್ರಭಾರ ಕಾರ್ಯದರ್ಶಿ

ತೆರೆದ ಅಂಚೆ

" Permitted to post on pre-payment of postage in cash at Business Post Center, Basavanagudi, Bengaluru - 560 004 under Postmaster General, Bengaluru HQ Region License No. KN/BGR/Notices/33953/2022/26.08.2022 to 02.09.2022 Postage Rs.4/- (Rupees Four only)

**ಗೆ,**

**ಶ್ರೀಮತಿ/ಶ್ರೀ**

**ಮೇಲಿನ ವಿಳಾಸಕ್ಕೆ ತಲುಪದಿದ್ದರೆ ದಯವಿಟ್ಟು**
**ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.**
ನಂ.30, 15ನೇ ಅಡ್ಡ ರಸ್ತೆ, 3ನೇ ಬ್ಲಾಕ್,
ಜಯನಗರ, ಬೆಂಗಳೂರು – 560 011 ಕ್ಕೆ ವಾಪಸ್ಸು ಕಳುಹಿಸುವುದು